(ಇಂದು ದಿನಾಂಕಃ 21-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಎಸ್ ವಕೀಲರಿಂದ ಃ**

1. ನಾನು ಹುಟ್ಟಿದಾಗಿನಿಂದ ಇಲ್ಲಿಯವರೆಗೆ ಚಿಮ್ಮಇದಲಾಯಿ ಗ್ರಾಮದಲ್ಲಿ ಇರುತ್ತೇನೆ. ಜಗದೇವಿ ಮತ್ತು ಮಲ್ಲಮ್ಮ ಚಿಮ್ಮಇದಲಾಯಿ ಗ್ರಾಮದಲ್ಲಿ ಇರುತ್ತಾರೆ. ಜಗದೇವಿ ತೀರಿಕೊಂಡು ಎಷ್ಟು ವರ್ಷ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಮಲ್ಲಪ್ಪ ಇರುತ್ತದೆ. ನನ್ನ ತಂದೆಗೆ 13 ಜನ ಮಕ್ಕಳು. ನನ್ನ ತಂದೆಯ 13 ಜನ ಮಕ್ಕಳ ಹೆಸರು ರಾಜಪ್ಪ, ಶಾಮರಾಯ, ಬಾಬು,ಪಿತಾಂಬರಾಯ, ಬಸಪ್ಪ ಇನ್ನು ಉಳಿದವರ ಹೆಸರು ನನಗೆ ನೆನಪಿಲ್ಲ. ನನ್ನ ಹಾಗೂ ನನ್ನ ತಂದೆಯ ಮಕ್ಕಳೊಂದಿಗೆ ಸರಿಯಾದ ಬಾಂಧವ್ಯ ಇಲ್ಲ ಆದ್ದರಿಂದ ನನಗೆ ಉಳಿದವರ ಹೆಸರು ಗೊತ್ತಿಲ್ಲ. ನನ್ನ ತಂದೆಯ 13 ಜನ ಮಕ್ಕಳು ಇದ್ದಾರೆ ಎಂದು ನನ್ನ ವಕೀಲರಿಗೆ ನಾನು ಹೇಳಿರುವುದಿಲ್ಲ. ಈ ದಾವೆ ಸಲ್ಲಿಸುವಾಗ ನನ್ನ ತಂದೆಯ 13 ಜನ ಮಕ್ಕಳು ಬೇರೆ ಬೇರೆ ಊರಿನಲ್ಲಿ ಇದ್ದಾರೆ ಎಂದು ನನಗೆ ಗೊತ್ತಿತ್ತು.

2. ದ್ರೌಪತಿ ಮಲ್ಲಪ್ಪ ಮುಃ ಚಿಮ್ಮಇದಲಾಯಿ ಎಂದರೆ ನಾನು ಎಂದರೆ ಸರಿ. ನನ್ನ ಗಂಡನ ಹೆಸರು ಮಲ್ಲಪ್ಪ ಹಾಗೂ ನನ್ನ ತಂದೆಯ ಹೆಸರು ಮಲ್ಲಪ್ಪ ಇರುತ್ತದೆ. ನನ್ನ ಗಂಡನ ಇನ್ನೊಂದು ಹೆಸರು ಮಲ್ಲಿಕಾರ್ಜುನ ಇರುತ್ತದೆ. ಚಿಮ್ಮಇದಲಾಯಿಯಲ್ಲಿ ಮನೆಯ ಸಂಖ್ಯೆ 85/1 ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಮಲ್ಲಮ್ಮ ತಂದೆ ಗರಮರಾವರವರ ಹೆಸರಿನಲ್ಲಿ ಮನೆಯ ಸಂಖ್ಯೆ 93 ಇದೆ ಎಂದರೆ ಸರಿ. ಜಗದೇವಿ ಗಂಡ ಅಣ್ಣಾರಾವ ಅವರ ಹೆಸರಿನಲ್ಲಿ ಮನೆಯ ಸಂಖ್ಯೆ 93/1 ಇದೆ ಎಂದರೆ ಸರಿ. ಇಷ್ಟು ಮನೆಗಳು ಇವೆ ಎಂದು ಈ ದಾವೆ ಸಲ್ಲಿಸುವಾಗ ನಾನು ನಮ್ಮ ವಕೀಲರಿಗೆ ಹೇಳಿರುತ್ತೇನೆ.ಈ ಮೇಲೆ ಹೇಳಿದ ನನ್ನ ತಂದೆಯ 13 ಜನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಹಾಗೂ ಮನೆಗಳನ್ನು ಈ ದಾವೆಯಲ್ಲಿ ಸೇರಿಸದೆ ಇದ್ದುದ್ದರಿಂದ ಈ ದಾವೆ ಕಾನೂನಿನಲ್ಲಿ ಉರ್ಜಿತವಾಗುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3.ನಾವು 3 ಜನ ಅಕ್ಕ ತಂಗಿಯರು ಬೇರೆ ಬೇರೆ ಊರಲ್ಲಿ ಇದ್ದರು ಸಹ ನಮ್ಮ ರೇಷನ ಕಾರ್ಡ ಬೇರೆ ಬೇರೆ ಇದೆ ಎಂದರೆ ಸರಿ. ನಾವು 3 ಜನ ಅಕ್ಕ ತಂಗಿಯರು ಜಂಟಿ ಆಗಿದ್ದೆವೆ ಒಂದೇ ಕಡೆ

ವಾಸವಾಗಿದ್ದೇವೆ ಎಂದು ತೋರಿಸಲು ಕಾಗದ ಪತ್ರ ಹಾಕಿಲ್ಲ ಎಂದರೆ ಸಾಕ್ಷಿ ಆ ರೀತಿ ಕಾಗದ ಪತ್ರ ನಾವು ಮಾಡಿಸಿಲ್ಲ ಎಂದು ಹೇಳುತ್ತಾರೆ.

4. ನನ್ನ ತಂದೆ ತೀರಿಕೊಂಡು 25 ವರ್ಷ ಆಗಿರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ತೀರಿಕೊಂಡು 26 ವರ್ಷ ಆಗಿದೆ ಎಂದರೆ ಸಾಕ್ಷಿ ಅದಕ್ಕಿಂತ ಮೊದಲೆ ತೀರಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ತೀರಿಕೊಂಡ ಎಷ್ಟು ವರ್ಷಗಳ ನಂತರ ನನ್ನ ತಾಯಿ ತೀರಿಕೊಂಡುರು ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆ ಆದ ಸಮಯದಲ್ಲಿ ನನ್ನ ತಂದೆ ಇರಲಿಲ್ಲ. ನನ್ನ ತಂದೆ ಬದುಕಿರುವವರಗೆ ಅವರು ಎಷ್ಟು ಎಕರೆ ಜಮೀನಿನ ಮಾಲಿಕರು ಇದ್ದರು ಎಂದರೆ ಸಾಕ್ಷಿ ನನ್ನ ತಂದೆಗೆ ಬೇರೆ ಆಸ್ತಿ ಇರುತ್ತದೆ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಗೆ ಎರಡು ಊರಿನಲ್ಲಿ ಆಸ್ತಿಗಳು ಇದ್ದವು. ಅವರಿಗೆ ಚಿಂಚೋಳಿ ತಾಲೂಕಿನ ಅಣವ್ವಾರ ಗ್ರಾಮದ ಪೋಲಕಪಳ್ಳಿಯಲ್ಲಿ ಮತ್ತು ಚಿಮ್ಮ ಇದಲಾಯಿಯಲ್ಲಿ ಆಸ್ತಿ ಇತ್ತು. ಪೋಲಕಪಳ್ಳಿಯಲ್ಲಿ ನನ್ನ ತಂದೆಗೆ ಅಂದಾಜೂ 60-80 ಎಕರೆ ಆಸ್ತಿ ಇತ್ತು. ನನ್ನ ತಂದೆ ಬದುಕಿರುವವರಗೆ ಅವರಿಗೆ ಚಿಮ್ಮ ಇದಲಾಯಿ ಗ್ರಾಮದಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿ 80 ರಿಂದ 95 ಎಕರೆ ಇತ್ತು ಎಂದು ಹೇಳುತ್ತಾರೆ. ಸದರಿ ಆಸ್ತಿಗಳು ಯಾವ ಸರ್ವೆ ನಂಬರನಲ್ಲಿ ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳು ಏನಾಯಿತು ಎಂದರೆ ಸಾಕ್ಷಿ ನನ್ನ ತಂದೆಯ ಕಡೆಯಿಂದ ಇದ್ದ ನನ್ನ ಅಣ್ಣ ತಮ್ಮಂದಿರು ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಉಳಿದ 30-40 ಎಕರೆ ಜಮೀನು ಈಗಲು ಚಿಮ್ಮ ಇದಲಾಯಿಯಲ್ಲಿ ಇದೆ ಎಂದರೆ ಸಾಕ್ಷಿ ನನ್ನ ತಂದೆಯ ಕಡೆಯಿಂದ ಇದ್ದ ನನ್ನ ಅಣ್ಣ ತಮ್ಮಂದಿರು ತೆಗೆದುಕೊಂಡಿರುತ್ತಾರೆ ಸ್ವಲ್ಪ ಮಾರಾಟ ಮಾಡಿ ಬೇರೆ ಇಟ್ಟುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಪೋಲಕಪಳ್ಳಿಯಲ್ಲಿರುವ ಆಸ್ತಿ ನಾನು ಸೇರಿಸಿಲ್ಲ ಎಂದರೆ ಸರಿ.

5. ನನ್ನ ತಂದೆ 3 ಮದುವೆ ಆಗಿದ್ದರು. ನನಗೆ 3 ಜನ ತಾಯಿಂದಿರು ಇರುತ್ತಾರೆ. ಮೊದಲನೆ ತಾಯಿಗೆ ಮಕ್ಕಳು ಇರಲಿಲ್ಲ. ನನ್ನ 2 ನೇ ಹಾಗೂ 3 ನೇ ತಾಯಿಯ ಹೆಸರು ನಾಗಮ್ಮ ಇರುತ್ತದೆ. ನನ್ನ ತಂದೆ 3 ಮದುವೆ ಆಗಿದ್ದರು. ನನಗೆ 3 ಜನ ತಾಯಿಂದಿರು ಇರುತ್ತಾರೆ. ಮೊದಲನೆ ತಾಯಿಗೆ ಮಕ್ಕಳು ಇರಲಿಲ್ಲ. ನನ್ನ 2 ನೇ ಹಾಗೂ 3 ನೇ ತಾಯಿಯ ಹೆಸರು ನಾಗಮ್ಮ ಇರುತ್ತದೆ ಎಂದು ನಾನು ನಮ್ಮ ವಕೀಲರಿಗೆ ಹೇಳಿರುವುದಿಲ್ಲ. ನನ್ನ ತಂದೆಯ 2 ನೇ ಹೆಂಡತಿ ನಾಗಮ್ಮ ಹಾಗೂ ನನ್ನ ತಾಯಿ ನಾಗಮ್ಮ

ಬೇರೆ ಬೇರೆ ಆಗಿರುತ್ತಾರೆ ಎಂದು ತೋರಿಸಲು ನಾನು ದಾಖಲೆಯನ್ನು ಸಲ್ಲಿಸಿಲ್ಲ. 2 ನೇ ಹೆಂಡತಿ ನಾಗಮ್ಮ ಅವರ ಮಕ್ಕಳಿಗೆ ನಾನು ಈ ದಾವೆಯ ಬಗ್ಗೆ ಯಾವುದೇ ನೋಟಿಸ್ಸು ಕೊಟ್ಟಿಲ್ಲ ಆದ್ದರಿಂದ ಅವರಿಗೆ ಇಲ್ಲಿಯವರೆಗೆ ಈ ದಾವೆಯ ಬಗ್ಗೆ ಗೊತ್ತಿಲ್ಲ ಎಂದರೆ ಸರಿ.

6. ಸರ್ವೆ ನಂಬರ 8/1 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ನನಗೆ ಬೇರೆ ಬೇರೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಒಟ್ಟು 50 ಎಕರೆ ಇರುವುದು ನನಗೆ ಗೊತ್ತು ಬೇರೆ ಬೇರೆ ಇರುವ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ 8/1 ಉತ್ತರಕ್ಕೆ ಜಗದೇವಿ ಗಂಡ ಅಣ್ಣಾರಾವ ಎಂಬುವವರ ಜಮೀನು ಇದೆ ಎಂದು ನಾನು ಚಕ್ಕುಬಂದಿ ಬರೆಸಿದ್ದು, ಆ ಪೂರ್ವಕ್ಕೆ ಇರುವ ಜಮೀನು ಜಗದೇವಿ ಗಂಡ ಅಣ್ಣಾರಾವ ಎಂಬುವವರಿಗೆ ಹೇಗೆ ಬಂತು ಎಂದರೆ ಸಾಕ್ಷಿ ಅಷ್ಟು ಅಷ್ಟು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಪೂರ್ವಕ್ಕೆ ಇರುವ ಜಮೀನು ಜಗದೇವಿ ಗಂಡ ಅಣ್ಣಾರಾವ ಹುಟ್ಟಿದಾಗಿನಿಂದಲು ಆ ಜಮೀನನ್ನು ಉಣ್ಣುತಿದ್ದಾಳೆ ಎಂದು ಹೇಳುತ್ತಾರೆ. ಸರ್ವೆ ನಂಬರ 8/1 ದಕ್ಷಿಣಕ್ಕೆ ಮಲ್ಲಪ್ಪ ತಂದೆ ಶಂಕರಪ್ಪ ಎಂಬುವವರ ಜಮೀನು ಇದೆ ಎಂದು ನಾನು ಚಕ್ಕುಬಂದಿ ಬರೆಸಿದ್ದು, ಆ ದಕ್ಷಿಣಕ್ಕೆ ಇರುವ ಜಮೀನು ಮಲ್ಲಪ್ಪ ತಂದೆ ಶಂಕರಪ್ಪ ಎಂಬುವವರಿಗೆ ಹೇಗೆ ಬಂತು ಎಂದರೆ ಸಾಕ್ಷಿ ನನ್ನ ತಾಯಿ ನನ್ನ ಗಂಡನಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಮದುವೆ ಆಗಿ ಎಷ್ಟು ವರ್ಷಗಳ ನಂತರ ಆ ಜಮೀನನ್ನು ನನ್ನ ತಾಯಿ ನನ್ನ ಗಂಡನಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಬೇರೆಯವರು ಮಾರಾಟ ಮಾಡಿದ ಜಮೀನು ನನಗೆ ಸಂಬಂಧ ಇಲ್ಲ ಎಂದು ಬರೆಸಿದ್ದು ನನ್ನ ಗಂಡನಿಗೆ ಮಾರಾಟ ಮಾಡಿದ ಜಮೀನು ನನಗೆ ಸಂಬಂಧ ಇಲ್ಲ ಎಂದು ಏಕೆ ಕೇಳಿಲ್ಲ ಎಂದರೆ ಸಾಕ್ಷಿ ಅದನ್ನು ನಾನು ಉಣ್ಣುತ್ತಿದ್ದೇನೆ ಎಂದು ಹೇಳುತ್ತಾರೆ. ನನ್ನ ತಾಯಿ ನನ್ನ ಗಂಡನಿಗೆ ಮಾರಾಟ ಮಾಡಿರುವ ಖರೀದಿ ಪತ್ರದಲ್ಲಿ ಮಲ್ಲಮ್ಮರವರ ಸಹಿ ಇಲ್ಲ ಮತ್ತು ನನ್ನ ಹಾಗೂ ಜಗದೇವಿಯವರ ಸಹಿ ಇಲ್ಲ ಎಂದರೆ ಸರಿ. ನನ್ನ ಗಂಡ ಖರೀದಿ ಮಾಡಿರುವ ಜಮೀನು ಫಲವತ್ತಾದ ಜಮೀನು ಇದೆ ಎಂದರೆ ಸರಿ. ಅಲ್ಲಿ ತೋಟ ಇದೆ ಎಂದರೆ ಸರಿ.

7. ಸರ್ವೆ ನಂಬರ 8 ರ ಜಮೀನು ದಿಃ13-03-1998 ರಲ್ಲಿ ನನ್ನ ಹೆಸರಿಗೆ ಯಾವ ಆಧಾರದ ಮೇಲೆ ಮ್ಯುಟೇಷನ ಆಯಿತು ಎಂದರೆ ಸಾಕ್ಷಿ ಮ್ಯುಟೇಷನ ಆಗಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ 8 ರ ಜಮೀನು ದಿಃ13-03-1998 ರಲ್ಲಿ ನನ್ನ ಹೆಸರಿಗೆ ಮ್ಯುಟೇಷನ ಆಗಿದ್ದು 2001 ರಲ್ಲಿ ಬ್ಯಾಂಕಿನವರು ಹೇಗೆ ಸಾಲ ಕೊಟ್ಟರು ಎಂದರೆ ಸಾಕ್ಷಿ ಅದು ನನ್ನ ಹೆಸರಿಗೆ ಇತ್ತು ನಾನು ಸಾಲ

ತೆಗೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಸರ್ವೆ ನಂಬರ 8 ರಲ್ಲಿ 9 ಎಕರೆ 27 ಗುಂಟೆ ಜಮೀನು ಇದೆ ಎಂದು ನನಗೆ 2001 ರಲ್ಲಿ ಗೊತ್ತಿತ್ತು ಎಂದರೆ ಸರಿ. ದಿಃ13-03-1998 ರಲ್ಲಿ ನನ್ನ ಹೆಸರಿಗೆ ಮ್ಯುಟೇಷ ಅನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನಾನು ಮಾಡಿಸಿಕೊಂಡಿಲ್ಲ ನಾನು ಏನು ಹೇಳಲಿ ಎಂದು ಹೇಳುತ್ತಾರೆ. ಈ ದಾವೆ ಸಲ್ಲಿಸುವಾಗ ಪಹಣಿಗಳು ನಮ್ಮ 3 ಜನ ಅಕ್ಕ-ತಂಗಿಯರ ಹೆಸರಿನಲ್ಲಿ ಇದ್ದವು ಸಾಕ್ಷಿ ಮುಂದುವರೆದು ಪಹಣಿಗಳನ್ನು ನಾನು ನೋಡಿಲ್ಲ ಎಂದು ಹೇಳುತ್ತಾರೆ. ಈ ದಾವೆಯನ್ನು ನಾನು ನನ್ನ ಅಕ್ಕ ನನ್ನ ತಂಗಿ ಹಾಗೂ ತೆಗೆದುಕೊಂಡವರ ಮೇಲೆ ಹಾಕಿದ್ದೇನೆ ಎಂದು ಹೇಳುತ್ತಾರೆ. ನನ್ನ ಗಂಡ ಜಮೀನು ಖರೀದಿ ಮಾಡಿದರು ಸಹ ನನ್ನ ಗಂಡನ ವಿರುದ್ದ ಈ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನ್ನ ತಾಯಿ ಮಾಡಿ ಹೋಗಿರುತ್ತಾಳೆ ಎಂದು ಹೇಳುತ್ತಾರೆ. ನನಗೆ ಮೊಹಮ್ಮ ಮಸ್ತಾನ ಸಾಬ ತಂದೆ ಮೌಲಾನಾಸಾಬ 6 ನೇ ಪ್ರತಿವಾದಿ ಗೊತ್ತಿರುತ್ತಾರೆ. ನಾನು ಈ ದಾವೆ ಸಲ್ಲಿಸುವ 10 ವರ್ಷಗಳ ಮೊದಲಿನಿಂದ 6 ನೇ ಪ್ರತಿವಾದಿ ಬಿತ್ತುವುದು ಬೇಳೆಯುವುದು ಮಾಡುತ್ತಿದ್ದಾನೆ ಎಂದರೆ ಸಾಕ್ಷಿ ಖರೀದಿ ತೆಗೆದುಕೊಂಡಿರುತ್ತಾನೆ ಆದ್ದರಿಂದ ಮಾಡುತ್ತಿದ್ದಾನೆ ಎಂದು ಹೇಳುತ್ತಾರೆ. 6 ನೇ ಪ್ರತಿವಾದಿ ದಿಃ 23-03-2009 ರಂದು ಜಮೀನು ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಆ ದಾಖಲೆ ಸಂಖ್ಯೆ 2155/2008-09 ಇದೆ ಎಂದರೆ ಸರಿ. 6 ನೇ ಪ್ರತಿವಾದಿ ದಿಃ 23-03-2009 ರಂದು ಜಮೀನು ಖರೀದಿ ಮಾಡಿದ್ದು ಸ್ವಾಧೀನದಲ್ಲಿ ಇದ್ದುದ್ದರಿಂದ ನಾವು ಯಾರು ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಖರೀದಿ ತೆಗೆದುಕೊಂಡಿರುತ್ತಾನೆ ಆದ್ದರಿಂದ ಮಾಡುತ್ತಿದ್ದಾನೆ ಎಂದು ಹೇಳುತ್ತಾರೆ. ನನಗೆ ಸುಶೀಲಮ್ಮ ಗಂಡ ಸಾಯಿಬಣ್ಣ ಸುಲಗಿತ್ತಿಯವರ ಪರಿಚಯ ಇದೆ. ಸರ್ವೆ ನಂಬರ 77 ರ ಜಮೀನಿನ್ನು ದಿಃ 04-03-2003 ರಂದು ಸುಶೀಲಮ್ಮ ಗಂಡ ಸಾಯಿಬಣ್ಣ ಸುಲಗಿತ್ತಿಯವರು ಖರೀದಿ ಮಾಡಿದ್ದು ಸ್ವಾಧೀನದಲ್ಲಿ ಇದ್ದುದ್ದರಿಂದ ನಾವು ಯಾರು ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಖರೀದಿ ತೆಗೆದುಕೊಂಡಿರುತ್ತಾನೆ ಆದ್ದರಿಂದ ಮಾಡುತ್ತಿದ್ದಾನೆ ಎಂದು ಹೇಳುತ್ತಾರೆ.

8. ಗೌನಳ್ಳಿ ಹಾದಿಗೆ ನಮ್ಮ ಊರಿನಲ್ಲಿ ಒಂದು ಮಠ ಇದೆ ಎಂದರೆ ಸರಿ. ಆ ಮಠಕ್ಕೆ ನಮ್ಮ ಊರಿನವರು ಹೋಗುತ್ತಾರೆ ಎಂದರೆ ಸರಿ. ಆ ಮಠ ಕಟ್ಟಿ 12-13 ವರ್ಷ ಆಯಿತು ಎಂದರೆ ಸರಿಯಲ್ಲ. ಸುಮಾರು 12 ವರ್ಷದಿಂದ ಆ ಮಠ ಅಲ್ಲೆ ಇದೆ ಎಂದರೆ ಸರಿ. ಸುಮಾರು 12 ವರ್ಷದಿಂದ ಆ ಮಠ ಅಲ್ಲೆ ಇದೆ ಎಂದು ನನಗೆ ಗೊತ್ತಿದೆ ಎಂದರೆ ಸರಿ. ಆ ಮಠದಲ್ಲಿ ಇರುವವರಿಗೆ ಗೌನಳ್ಳಿ ಮುತ್ಯಾ ಎನ್ನುತ್ತಾರೆ ಎಂದರೆ ಸಾಕ್ಷಿ ಯಾವುದೇ ಉತ್ತರವನ್ನು ಕೊಡುವುದಿಲ್ಲ. ಸರ್ವೆ ನಂಬರ

9 ರಲ್ಲಿ ಗೌನಳ್ಳಿ ಮುತ್ಯಾ ಮಠ ಕಟ್ಟಿ ಕೊಂಡು 12 ವರ್ಷದಿಂದ ಅವರು ಸ್ವಾಧೀನದಲ್ಲಿ ಇರುವ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿ. ಸರ್ವೆ ನಂಬರ 9 ರಲ್ಲಿ ಗೌನಳ್ಳಿ ಮುತ್ಯಾ ಮಠ ಕಟ್ಟಿ ಕೊಂಡು 12 ವರ್ಷದಿಂದ ಅವರು ಸ್ವಾಧೀನದಲ್ಲಿ ಇರುವ ಬಗ್ಗೆ ನನಗೆ ಗೊತ್ತಿದ್ದರು ಸಹ ನಾವು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ. ಈ ಮೂರು ಆಸ್ತಿಗಳು ಮಾರಾಟ ಮಾಡಿದ್ದು ನಾವು ಸ್ವಾಧೀನದಲ್ಲಿ ಇರುವುದಿಲ್ಲ ಆದ್ದರಿಂದ ಸರಿಯಾದ ನ್ಯಾಯಾಲಯದ ಶುಲ್ಕ ಪಾವತಿ ಮಾಡದೆ ಇರುವುದರಿಂದ ಈ ದಾವೆ ವಜಾ ಮಾಡಲು ಯೋಗ್ಯ ಇರುತ್ತದೆ ಎಂದರೆ ಸಾಕ್ಷಿ ಯಾಕೆ ವಜಾ ಮಾಡಬೇಕು ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.